ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ. : 2419677/2419361
ಫ್ಯಾಕ್ಸ್: 0821-2419363/2419301

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ:ಎಸಿ4/42/2016-17 ದಿನಾಂಕ: 01-08-2016.

## ಅಧಿಸೂಚನೆ

ವಿಷಯ: 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ(I, III & V) ಬಿ.ಎ./ಬಿ.ಎಸ್ಸಿ./ಬಿ.ಸಿ.ಎ./ಬಿ.ಕಾಂ./ಬಿ.ಟಿ.ಹೆಚ್./ಬಿ.ಎಸ್ಸಿ./(ಎಫ್.ಸಿ.ಎಸ್ಸಿ.)/ಬಿಬಿಎ/ಬಿ.ಎಸ್.ಡಬ್ಲ್ಯೂ/ ಬಿ.ಫೈನ್‌ಆರ್ಟ್ಸ್/ಬಿ.ಎ.(ಪ್ರದರ್ಶನ ಕಲೆ)/ಬಿ.ಎಸ್ಸಿ. (ವಾಕ್ ಮತ್ತು ಶ್ರವಣ) ಪದವಿ ಕೋರ್ಸ್‌ಗಳ ಪ್ರವೇಶಾತಿ ಬಗೆಗೆ.

ಉಲ್ಲೇಖ: 1. ಈ ಕಛೇರಿ ಇದೆ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 19-05-2016.
2. ಪ್ರಾಂಶುಪಾಲರುಗಳು ಸಲ್ಲಿಸಿರುವ ಮನವಿ ಪತ್ರಗಳು.

*****

ಉಲ್ಲೇಖಿತ ಅಧಿಸೂಚನೆಗೆ ಮುಂದುವರಿಕೆಯಾಗಿ, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳಲ್ಲಿ (ಕಾಲೇಜು ಅಭಿವೃದ್ಧಿ ಮಂಡಳಿಯವರು ನೀಡಿರುವ ಆಯಾ ವಿಷಯ ಸಮೂಹಗಳ ಸಂಖ್ಯಾಮಿತಿಯೊಳಗೆ ಸೀಟುಗಳು ಲಭ್ಯವಿದ್ದಲ್ಲಿ ಮಾತ್ರ) 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ರೂ.500/-ಗಳ ದಂಡ ಶುಲ್ಕದೊಂದಿಗೆ ದಿನಾಂಕ 30-07-2016 ಅಂತಿಮ ದಿನವಾಗಿತ್ತು. ಉಲ್ಲೇಖಿತ 2ರಲ್ಲಿ, ಪ್ರಾಂಶುಪಾಲರುಗಳು ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ, ದಿನಾಂಕ 01-08-2016 ರಿಂದ 08-08-2016ರ ವರೆಗೆ ರೂ.1000/- ದಂಡ ಶುಲ್ಕದೊಂದಿಗೆ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲಾಗಿದೆ, (ಕಾವಾ ವಾರ್ಷಿಕ ಪದ್ಧತಿಗೂ ಇದು ಅನ್ವಯಿಸುತ್ತದೆ). ಯಾವುದೇ ಕಾರಣದಿಂದ ಕಡೆಯ ದಿನಾಂಕವನ್ನು ರಜೆ ಎಂದು ಘೋಷಿಸಿದಲ್ಲಿ, ಅನ್ವಯಿಸುವ ದಿನಾಂಕವನ್ನು ಮುಂದಿನ ಕೆಲಸದ ದಿನಾಂಕವೆಂದು ಪರಿಗಣಿಸುವುದು. ಈ ಸಂಬಂಧ ಪ್ರತಿ ವಿದ್ಯಾರ್ಥಿಯಿಂದ ಕೆಳಕಂಡಂತೆ ಮುಚ್ಚಳಿಕೆಯನ್ನು ಬರೆಯಿಸಿಕೊಳ್ಳುವುದು.

## ಮುಚ್ಚಳಿಕೆ

2016-17ನೇ ಶೈಕ್ಷಣಿಕ ಸಾಲಿನಲ್ಲಿ, ನಾನು ದಿನಾಂಕ__________ ಪ್ರವೇಶ ಪಡೆದಿರುತ್ತೇನೆ ಹಾಗೂ ಹಾಜರಾತಿಯು ನನ್ನ ಸ್ವಂತ ಜವಾಬ್ದಾರಿಯಾಗಿರುತ್ತದೆ ಮತ್ತು ವಿಶ್ವವಿದ್ಯಾನಿಲಯ/ಕಾಲೇಜು ಯಾವುದೇ ರೀತಿಯಲ್ಲೂ ಹೊಣೆಯಾಗಿರುವುದಿಲ್ಲ ಎಂದು ತಿಳಿದಿರುತ್ತೇನೆ.

01/8
ಉಪ ಕುಲಸಚಿವ(ಶೈಕ್ಷಣಿಕ)
01/08

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ಬಿ.ಪಿ.ಎ./ಬಿ.ಸಿ.ಎಸ್/ಬಿ.ಎಸ್‌ಸಿ./ ಬಿ.ಕಾಂ./ಬಿ.ಬಿ.ಎ/ಬಿ.ಟಿ.ಹೆಚ್./ಬಿ.ಎಸ್.ಡಬ್ಲ್ಯೂ./ಬಿ.ಫೈನ್ ಆರ್ಟ್ಸ್/ಬಿ.ಎ.(ಪ್ರದರ್ಶನ ಕಲೆ)/ಬಿ.ಎಸ್ಸಿ.(ವಾಕ್ ಮತ್ತು ಶ್ರವಣ) ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- ಮಾಹಿತಿಗಾಗಿ.
3. ನಿರ್ದೇಶಕರು, ಜಯಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು, ಸಯ್ಯಾಜಿರಾವ್ ರಸ್ತೆ, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

P.T.O

5. ಡೀನರು, ವಿಜ್ಞಾನ/ವಾಣಿಜ್ಯ ಮತ್ತು ಕಲಾ ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಪ್ರೊ.ಜಿ.ಹೇಮಂತ್ ಕುಮಾರ್. ಸಂಯೋಜಕರು. ಐಸಿಡಿ. ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು.– **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.**
11. ಸಂಬಂಧಿಸಿದ ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು/ವಿಷಯ ನಿರ್ವಾಹಕರಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈವಿವಿ, ಮೈಸೂರು.
13. ಕಛೇರಿ ಪ್ರತಿ